

ಸುದ್ದಿ ಕೇಳಿ, ಕಾಲೋನಿಯ ಎಲ್ಲರಂತೆ, ಪೊನ್ನುಸಾಮಿಯೂ ತಲ್ಲಣಗೊಂಡಿದ್ದ. ತನ್ನ ನೈಟ್‌ವಾಚ್‌ಮನ್ ಡ್ಯೂಟಿ ಮುಗಿಸಿ ಬೆಳಗ್ಗೆ ಮನೆಗೆ ಬಂದ ಕೂಡಲೇ ಅವನನ್ನೇ ಕಾಯುತ್ತಿದ್ದವಳಂತೆ ಹೆಂಡತಿ ಚಿನ್ನಮ್ಮ ಹೇಳಿದ್ದಳು "ಆ ಕೊನೇ ಮನೆ ಹುಡ್ಗ ಮುರುಗೇಶ ರೈಲಿಗ್ ಸಿಕ್ಕಂಡು ಸತ್ನಂತೆ" ಎಂದು. "ಅಯ್ಯೋ ದೇವ್ರೆ, ಎಂಥಾ ಕೆಲ್ಸ ಆತು. ಇನ್ನ ಹೈಸ್ಕೂಲಿಗ್ ಹೋಗ್ತಿದ್ ಹುಡ್ಗ ಅಲ್ವಾ? ಯಾಕಂತೆ?" ಎಂದು ಹೆಂಡತಿಯನ್ನು ಕೇಳಿದ.

"ಸರಿಯಾಗಿ ಗೊತ್ತಿಲ್ಲಪ್ಪ. ಬೆಳಗ್ಗೆ ಸಂಡಾಸಿಗೇಂತ ಹೋಗಿತ್ತೋ ಏನೋ ರೈಲ್ ಕಂಬಿ ತಾವ. ಅಥ್ವಾ ತಾನೇ ಹೋಗಿ ತಲೆ ಕೊಡ್ತೋ. ಯಾರಿಗ್ಗೊತ್ತು. ಎಸ್ಸೆಸ್ಸೆಲ್ಸಿ ಓದೋ ಹುಡ್ಗ ಆಗಿದ್ರೆ, ಫೇಲ್ ಗೀಲ್ ಆಗಿದ್ನೋ, ನಂಬ್ರು ಕಮ್ಮಿ ಬಂದಿತ್ತೋ ಅನ್ಬೋದಿತ್ತು. ಅದಿನ್ನೂ ಒಂಬತ್ನೇ ಕ್ಲಾಸು. ಲವ್ ಗಿವ್ವು ಅನ್ನೋಕೆ ಅದ್ಕಿನ್ನೂ ಮೀಸೇನೂ ಬಂದಿಲ್ಲ. ಈಗಿನ್ ಕಾಲ್ದ್ ಹುಡುಗ್ರಿಗೆ ಯಾರ್ ಬಗ್ಗೇನೂ ಯೋಚ್ನೆ ಅನ್ನೋದೇ ಇರಲ್ಲ ನೋಡು. ಈಗ್ ಅವ್ನು ಸತ್ತೋದ. ಇರಾ ಒಬ್ನೇ ಮಗುನ್ ಕಳ್ಕಂಡ್ ಅಪ್ಪ ಅಮ್ಮ ಏನ್ಮಾಡ್ಬೇಕು? ಅದಾರ ಯೋಚ್ನೆ ಮಾಡ್ಬಾರದಾ?" ಸ್ವಗತ ಎಂಬಂತೆ ಮಾತನಾಡುತ್ತಾ ಹೋದಳು ಚಿನ್ನಮ್ಮ.

ಇವೆಲ್ಲಾ ಪೊನ್ನುಸಾಮಿಗೆ ತಿಳಿದ ವಿಷಯಗಳೇ. ಅವನಿಗೆ ಅರ್ಥವಾಗದಿದ್ದುದು ಆ ಹುಡುಗ ಯಾಕೆ ಸತ್ತ ಅನ್ನುವುದು. ಇವಳಿಂದ ಆ ಬಗ್ಗೆ ಮಾಹಿತಿ ಸಿಗದಿದ್ದಾಗ, ಕಾಲೋನಿಯ ಬೇರೆ ಯಾರನ್ನಾದರೂ ಕೇಳುವುದು ಅನಿವಾರ್ಯವಾಯಿತು. ನೈಟ್ ಡ್ಯೂಟಿ ಮುಗಿಸಿ ಮನೆಗೆ ಬಂದವನು ಹತ್ತು ಹನ್ನೊಂದು ಗಂಟೆಯವರೆಗೆ ಮಲಗುವುದು ರೂಢಿ. ಆದರೆ ಇವತ್ತಿನ ಸನ್ನಿವೇಶದಲ್ಲಿ ಅದಕ್ಕೆ ಅವಕಾಶವಿರಲಿಲ್ಲ. ಎಷ್ಟೇ ಆದರೂ ಸತ್ತಿರುವ ಹುಡುಗ ಇವರ ಕಾಲೋನಿಯವನೇ. ಅಷ್ಟೇ ಏಕೆ, ಒಟ್ಟಿಗೆಯೇ ತಮಿಳುನಾಡಿನಿಂದ ವಲಸೆ ಬಂದವರು. ಒಂದು ರೀತಿಯಲ್ಲಿ ದಾಯಾದಿಗಳೂ ಹೌದು. ಒಂದೇ ಸ್ಥಳದಲ್ಲಿ ಗುಡಿಸಲು ಹಾಕಿಕೊಂಡು ನೆಲೆನಿಂತವರು. ಬೃಹದಾಕಾರವಾಗಿ ಬೆಳೆದುನಿಂತ ಆ ನಗರದಲ್ಲಿ ಇವರಿಗೆ ಕರೆದು ಜಾಗ ಕೊಡುವವರು ಯಾರು. ನಗರದಲ್ಲಿದ್ದ ಎಲ್ಲಾ ಕೆರೆಗಳನ್ನು, ಕಾಲುವೆಗಳನ್ನು, ಖಾಲಿ ಇದ್ದ ಸ್ಥಳವನ್ನೆಲ್ಲಾ ಭೂ ರಕ್ಕಸರು ತಿಂದು ತೇಗಿ ದೊಡ್ಡವರಾಗಿಯಾಗಿತ್ತು. ರೈಲು ಕಂಬಿಯ ಆಚೀಚೆಯ ನೂರು ಮೀಟರ್ ಜಾಗ ರೈಲು ಇಲಾಖೆಗೆ ಸೇರಿದ್ದು. ಹಾಗಾಗಿ ಅದನ್ನು ಅತಿಕ್ರಮಣ ಮಾಡಿ ಯಾರೂ ಅಪಾರ್ಟ್‌ಮೆಂಟುಗಳನ್ನು ಕಟ್ಟಿರಲಿಲ್ಲ. ವಲಸೆ ಬಂದ ಇವರಿಗೆ ಅದು ಗುಡಿಸಲು ಹಾಕಿಕೊಳ್ಳಲು ಸೂಕ್ತವಾದ ಜಾಗವೇ ಆಗಿತ್ತು. ರೈಲು ಕಂಬಿಯ ಎರಡೂ ಬದಿಯಲ್ಲಿ ಒಂದೊಂದೇ ಗುಡಿಸಲುಗಳು ಎದ್ದವು. ಮೊದಮೊದಲು ನಾಲ್ಕಾರು ಗುಡಿಸಲುಗಳಿದ್ದುದು, ಮತ್ತೆ ಮತ್ತೆ ವಲಸೆ ಬಂದವರಿಂದಾಗಿ ಈಗ ಸುಮಾರು ಐವತ್ತು ಗುಡಿಸಲುಗಳ ಕಾಲೋನಿಯೇ ಅಗಿಬಿಟ್ಟಿತ್ತು. ಯಾವತ್ತೋ ಒಂದು ಸಾರಿ ಅಧಿಕಾರಿಗಳು ಬಂದು ಗದರಿಸಿ ಹೋಗುತ್ತಿದ್ದರಷ್ಟೇ. ಖಾಲಿ ಮಾಡಿಸಲು ಹೋದರೆ ರಾಜಕೀಯ ಒತ್ತಡ ಬರುವುದು ಗ್ಯಾರಂಟಿ ಎಂದು ಅವರಿಗೂ ಗೊತ್ತಿತ್ತು. ಓಟಿನ ಸಲುವಾಗಿ ಒಂದಲ್ಲ ಒಂದ ರಾಜಕೀಯ ಪಕ್ಷ ಇವರ ಪರವಾಗಿ ನಿಲ್ಲುತ್ತಲಿತ್ತು.

ಇವರೆಲ್ಲಾ ವಲಸೆ ಬಂದಿದ್ದೂ ಊರಲ್ಲಿ ಬರಗಾಲ ಬಂದು ಇದ್ದ ಜಮೀನೆಲ್ಲಾ ಪಾಳು ಬಿದ್ದ ಮೇಲೆಯೇ. ಕೈಯಲ್ಲಿದ್ದ ಮೂರು ಕಾಸು, ಆರು ಕಾಸು ಇಲ್ಲಿಗೆ ಬರುವ ಚಾರ್ಜಿಗೆ, ಲಗೇಜಿಗೆ ಆಯ್ತು. ಹಾಗಾಗಿ ಗಂಡಸರು ಕೂಲಿ ನಾಲಿ ಮಾಡುವುದು, ಹೆಂಗಸರು ಮನೆಗೆಲಸಕ್ಕೆ ಹೋಗುವುದು, ಹೀಗೆ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ದುಡಿಮೆಗೆ ತೊಡಗಿದ್ದರು. ಈ